ದಿನಾಂಕ 20 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ವಾದಿ ಪರ ವಕೀಲರಿಂದಃ-

ನಿಟ್ಟೂರು, ಜಾಗಲೆ ರಸ್ತೆಯಿಂದ ನಮ್ಮ ಆಸ್ತಿಗೆ ಹೋಗಲು ಇರುವ ರಸ್ತೆ ವಾದಿಯ ಯ಼ಾವ ಸರ್ವೆ ನಂ ಇದೆ ಎಂದು ನನಗೆ ಗೊತ್ತಿಲ್ಲ, ಅದು ಸರ್ವೆ ನಂ 52 ಆಗಿರಬಹುದು ಎನ್ನುತ್ತಾರೆ. ಸರ್ವೆ ನಂ 77/5 ಆಸ್ತಿ ವಾದಿಗೆ ಸೇರಿದ್ದು ಅದರಲ್ಲಿ ರಸ್ತೆ ಇದ್ದು ಆ ವಿಚಾರ ನನಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಸ್ತೆಯ 2 ಬದಿ ವಾದಿಯವರ ಕಾಫಿ ತೋಟ ಇದೆ ಎಂದರೆ ಕಾಫಿ ತೋಟ ಇದೆ ಯಾರದ್ದು ಎಂದು ನನಗೆ ಗೊತ್ತಿಲ್ಲ. ವಾದಿಯವರ ಕಾಫಿ ತೋಟ ಹಾಗೂ ಅವರೇ ಸ್ವಾಧೀನದಲ್ಲಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 77/5 ನಲ್ಲಿ ರಸ್ತೆ ಇರುವ ಬಗ್ಗೆ ಗ್ರಾಮ ನಕ್ಷೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿ ಪಿ 8 ನಕ್ಷೆಯನ್ನು ತೋರಿಸಿದ್ದು ಸರ್ವೆ ನಂ 77/5 ರಲ್ಲಿ ರಸ್ತೆ ಇರುವ ಬಗ್ಗೆ ತಿಳಿಯುತ್ತಿಲ್ಲ ಎನ್ನುತ್ತಾರೆ. ನಿ ಪಿ 8 ರಲ್ಲಿ ಸರ್ವೆ ನಂ 77/5 ರಲ್ಲಿ ರಸ್ತೆ ಇಲ್ಲದಿರುವ ಬಗ್ಗೆ ನನಗೆ ಕಾಣುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ ಪಿ 12 ರಿಂದ 15 ರಲ್ಲಿ ಫೋಟೋಗಳನ್ನು ತೋರಿಸಿದ್ದು ಅದು ಸರ್ವೆ ನಂ 99 ಕಡಂಗಕ್ಕಾಗಿ ಇರುವ ರಸ್ತೆ ಎಂದರೆ 50 ಅಡಿ ಮಾತ್ರ ರಸ್ತೆ ಇದೆ ಮುಂದೆ ತೋಟ ಇದೆ ಎನ್ನುತ್ತಾರೆ. ಒಂದು ವೇಳೆ ಕಡಂಗದ 50 ಅಡಿ ದೂರದ ರಸ್ತೆಯನ್ನು ಮುಂದುವರೆಸಿದರೆ ನಮ್ಮ ಮನೆ ಹಾಗೂ ಕೆರೆಗೆ ಅಂದರೆ ಸರ್ವೆ ನಂ 77/16, ಸರ್ವೆ ನಂ 77/17 ಗೆ ತಲುಪಬಹುದು ಎಂದರೆ ರಸ್ತೆ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ನಿಟ್ಟೂರು ಜಾಗಲೆ ಮುಖ್ಯ ರಸ್ತೆಗೆ, ಮಾಪಂಗಡ, ಮುಚ್ಚಮಾಡ ಕುಟಂಬದ ಆಸ್ತಿಗಳಿಗೆ ಸಮೀಪದಲ್ಲಿ ಇದೆ ಎನ್ನುತ್ತಾರೆ. ಸರ್ವೆ ನಂ 99 ಕಡಂಗಕ್ಕಾಗಿ ರಸ್ತೆ ಮಾಡಬೇಕೆಂದು ವಿರಾಜಪೇಟೆ ತಹಶೀಲ್ದಾರವರು ಸ್ಥಳ ಪರಿಶೀಲನೆ ಮಾಡಿ ಮಹಜರ್ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸಹ ಹಾಜರಿದ್ದೆ ಆದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ 99 ಕಡಂಗ ಪರಿಶೀಲನೆಗೆ ತಹಶೀಲ್ದಾರವರು ಹಾಜರಾಗಲು ಟಿ. ವಿ. ಟಿ. ಎಂ. ಎ. ಜಿ ದಾರಿ 3/2018-2019 ರಲ್ಲಿ ನನಗೆ ಯಾವ್ರೂದೇ ನೋಟೀಸ್ ನೀಡಿಲ್ಲ ಎನ್ನುತ್ತಾರೆ. ದಿ. 23.06.2018 ರಂದು ನನಗೆ ತಹಶೀಲ್ದಾರವರು ನೋಟೀಸ್ ನೀಡಿದ್ದರೂ, ರೆವಿನ್ಯೂ ಇಲಾಖೆಯವರು ಹಾಗೂ ನಾನು, ಇತರೇ ಪ್ರತಿವಾದಿಯವರು ಹಾಜರಿದ್ದರು ಎಂದರೆ ಸರಿಯಲ್ಲ. ನಾವು ಸ್ಥಳ ಪರಿಶೀಲನೆಗೆ ತಕಾರರು ಮಾಡಿದ್ದೆವು ಎಂದರೆ ಸರಿಯಲ್ಲ. ಆ ದಿನ ಆರ್. ಐ ರವರು ಸರ್ವೆ ನಂ 99 ರಲ್ಲಿ ರಸ್ತೆ ಮಾಡಬೇಕು ಎಂದು ಶಿಪಾರಸ್ಸು ಮಾಡಿ ತಹಶೀಲ್ದಾರವರಿಗೆ ನಿ ಪಿ 8 ರಂತೆ ವರದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 17 ರಂತೆ ಆರ್. ಐ ರವರು ಆದಿನ ಮಹಜರ್ ಸಹ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ವಾದಿಯವರ ತೋಟದ ಮಧ್ಯ ಇರುವ ರಸ್ತೆ ಸಾರ್ವಜನಿಕರ ರಸ್ತೆ ಎಂದು ಹೇಳಲು 1945 ರಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಡಿಕ್ರಿ ಆಗಿದೆ ಹಾಗೂ ಪಂಚಾಯಿತಿಯವರು ರಸ್ತೆಗೆ ಡಾಂಬರು ಹಾಗೂ ಕಲ್ಲು ಹಾಕಿದ ಬಗ್ಗೆ ದಾಖಲಾತಿ ಇದೆ ಎನ್ನುತ್ತಾರೆ. Central Government Scheme ಪ್ರಕಾರ ಪ್ರತಿಯೊಬ್ಬ ಪ್ರಜೆಯ ಮನೆಗೆ ರಸ್ತೆ ಸಂಪರ್ಕಿಸಲು ಸರ್ಕಾರದಿಂದ ರಸ್ತೆ ಮಾಡುತ್ತಾರೆ ಎಂದರೆ ಸರಿ. ಪಂಚಾಯಿತಿಯಲ್ಲಿ ಮಲ್ಲೀರ ಹಾಗೂ ಮಚ್ಚಮಾಡ ಮನೆಗೆ ಹೋಗುವ ರಸ್ತೆ ಎಂದು ನಮೂದಿಸಿದ್ದಾರೆ ಎನ್ನುತ್ತಾರೆ. ನಿ ಡಿ 1 ದಾಖಲಾತಿಯನ್ನು ಓದಲು ಆಗುತ್ತಿಲ್ಲ. ನಿ ಡಿ 1 ದಾಖಲಾತಿ ಸ್ಪಷ್ಟವಾಗಿಲ್ಲದ ಕಾರಣ 2 ಪುಟಗಳನ್ನು ಓದಲು ಆಗುತ್ತಿಲ್ಲ ಎಂದರೆ ಸರಿ. ನಿ ಡಿ 2 ದಾಖಲಾತಿಯನ್ನು ಯಾವ ಕಾರಣಕ್ಕೆ ಹಾಜರುಪಡಿಸಿದ್ದೇನೆ ಎಂದು ನನಗೆ ತಿಳಿಯುತ್ತಿಲ್ಲ ಎನ್ನುತ್ತಾರೆ. ನಿ ಡಿ 3 ಅನ್ನು ರಸ್ತೆ ವಿಚಾರಕ್ಕಾಗಿ ಹಾಜರುಪಡಿಸಿರಬಹುದು ಎನ್ನುತ್ತಾರೆ. ನಿ ಡಿ 3 ಅನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಿದ್ದೇನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ.

ಮಲ್ಲಂಗಡ ಕುಟುಂಬಸ್ಥರು ಯಾವಾಗ ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ವಾದಿಯವರ ತಂದೆಗೆ ಯಾವ ಆಸ್ತಿಬಂದಿದೆ ಎಂದು ನನಗೆ ಗೊತ್ತಿಲ್ಲ. ಗಣಪತಿಯವರ ಮಕ್ಕಳು ಯಾವಾಗ ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ 99 ಕಡಂಗವನ್ನು ನಮ್ಮ ತಪ್ಪಿನಿಂದಲೇ ಮುಚ್ಚಿದ್ದೇನೆ ಎಂದರೆ ನನ್ನ ಅಣ್ಣ ಹಾಗೂ ತಂದೆ ತೋಟ ಮಾಡಿದ್ದಾರೆ ಎನ್ನುತ್ತಾರೆ. ಕಡಂಗವನ್ನು, ಕಡಂಗವಾಗಿ ಬಿಡದೆ ತೋಟ ಮಾಡಿರುವುದು ಕಾನೂರು ಬಾಹಿರ ಎಂದರೆ ಅದು ನಾನು ಹೇಳಲಾಗುವುದಿಲ್ಲ ಎನ್ನುತ್ತಾರೆ. ನನ್ನ ಕುಟುಂಬದವರ ತಪ್ಪಿನಿಂದ ಕಡಂಗವನ್ನು ಮುಚ್ಚಿ, ವಾದಿಯವರ ಸ್ವಂತ ಆಸ್ತಿಯಲ್ಲಿರುವ ಅವರ ರಸ್ತೆಯನ್ನು ನಮ್ಮ ಉಪಯೋಗಕ್ಕೆ ರಸ್ತೆ ಕೇಳಲು

ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಯವರ ತೋಟದಲ್ಲಿರುವ ರಸ್ತೆ ಸಾರ್ವಜನಿಕರ ರಸ್ತೆ ಅಲ್ಲ, ಅವರ ಸ್ವಂತ ರಸ್ತೆ ಎಂದರೆ ಸರಿಯಲ್ಲ. ಸಾಧಾರಣವಾಗಿ ವ್ಯವಸಾಯ ಮಾಡಲು ತೋಟದ ಮಧ್ಯೆ ರಸ್ತೆ ಬಿಟ್ಟಿರುತ್ತಾರೆ, ಸದರಿ ರಸ್ತೆಯಲ್ಲಿ ಸಾರ್ವಜನಿಕರು, ದನ, ಕರು, ಓಡಾಡಿದರೆ ಅವರ ವ್ಯವಸಾಯಕ್ಕೆ ತೊಂದರೆ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆ ರೀತಿ ಯಾರೂ ಸಹ ಸ್ವಂತ ರಸ್ತೆಯಲ್ಲಿ ಬೇರೆಯವರು ಓಡಾಡಲು ಬಿಡುವುದಿಲ್ಲ ಎನ್ನುತ್ತಾರೆ. ನಷ್ಟ ಉಂಟಾಗುತ್ತದೆ ಎಂಬ ಕಾರಣದಿಂದ ಬೇರೆಯವರು ಓಡಾಡಲು ಬಿಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ವಾದಿಯವರ ತೋಟದಲ್ಲಿ ನಾನು ರಸ್ತೆ ಕೇಳುವುದರಲ್ಲಿ ಯಾವುದು ಉರುಳಿಲ್ಲ ಹಾಗೂ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ತಮ್ಮಂದಿರು ತುಂಬಾ ಜನ ಇರುವ ಕಾರಣ ವಾದಿಯ ಇಚ್ಛೆಗೆ ವಿರುದ್ಧವಾಗಿ ಅವರ ರಸ್ತೆಯಲ್ಲಿ ಓಡಾಡಲು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಆದ ಕಾರಣ ವಾದಿಯವರು ನಾವು ಓಡಾಡುವುದನ್ನು ತಡೆಯಲು ಕೋರಿರುವ ಪರಿಹಾರಕ್ಕೆ ಅರ್ಹರು ಎಂದರೆ ಸರಿಯಲ್ಲ. ನಾವು ಈ ದಾವೆಯ ಯಾವುದೇ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.